<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 31072-2018

ಸಿಡಬ್ಲೂ -7 ಪಿಡಬ್ಲೂ-1

ಸಾಕ್ಷಿದಾರರ ಹೆಸರು : ತಿಮ್ಮಾಚಾರಿ
ತಂದೆಯ ಹೆಸರು : ಶ್ರೀನಿವಾಸ ಆಚಾರಿ
ವಯಸ್ಸು : 45 ವರ್ಷ
ಕೆಲಸ : ಎ ಎಸ್ ಐ, ಮಲ್ಲೇಶ್ವರಂ ಪೊ.ಠಾ
ವಾಸ : ವಿದ್ಯಾರಣ್ಯಪುರ, ಬೆಂಗಳೂರು

<u>ಸಾಕ್ಷಿಯನ್ನು ದಿನಾಂಕಃ 26-09-2025 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 2016 ರಿಂದ 2021 ರವರೆಗೆ ವೈಯಾಲಿಕಾವಲ್ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 23-08-2018 ರಂದು ಚಾಸಾ 12 ರವರು ನನ್ನನ್ನು ಮತ್ತು ಚಾಸಾ 8 ರಿಂದ 10 ರವರನ್ನು ನಮ್ಮ ಠಾಣೆಯ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚುವ ಬಗ್ಗೆ ಕರ್ತವ್ಯಕ್ಕೆ ನೇಮಕ ಮಾಡಿದ್ದು, ಅದರಂತೆ ನಾವು ಚಾಸಾ 1 ರವರನ್ನು ಬೇಟಿ ಮಾಡಿ ನಮ್ಮೊಂದಿಗೆ ಕರೆದುಕೊಂಡು ಆರೋಪಿಯ ಮನೆಯ ಬಳಿ ಹೋಗಿ ಆತನ ಮನೆಯಿಂದ ಆತನನ್ನು ವಶಕ್ಕೆ ಪಡೆದು ವರದಿಯೊಂದಿಗೆ ಚಾಸಾ12 ರವರ ಮುಂದೆ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ನಾನು ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಮತ್ತು ಚಾಸಾ 12 ರವರ ಮುಂದೆ ಹಾಜರುಪಡಿಸಿಲ್ಲ ಮತ್ತು ನಿಪಿ. 1 ರಂತೆ ವರದಿಯನು ನೀಡಿಲ್ಲ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ